**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**Spl.C. 143/2020**

**P.W.-7**
**C.W.-22**

ಹೆಸರು : ಡಾಃ ಎಂ.ಕೃಷ್ಣರಾಜು

ತಂದೆಯ ಹೆಸರು : ಮರಿಮಾದಯ್ಯ

ವಯಸ್ಸು : 59 ವರ್ಷ

ಉದ್ಯೋಗ : ಉಪ ಕಾರ್ಯದರ್ಶಿ (ಅಭಿವೃದ್ದಿ) , ಜಿಲ್ಲಾ ಪಂಚಾಯತ್ , ಮೈಸೂರು

ವಾಸಸ್ಥಳ : ಮೈಸೂರು

**ದಿನಾಂಕಃ 07.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ –**

ನಾನು ಜುಲೈ 2019 ರಿಂದ ಜುಲೈ 2021 ರವರೆಗೆ ಮೈಸೂರಿನ ಜಿಲ್ಲಾ ಪಂಚಾಯತ್ , ಉಪ ಕಾರ್ಯದರ್ಶಿ (ಅಭಿವೃದ್ದಿ) , ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ದಿಃ 03.09.2019 ರಂದು ಪೋಲೀಸ್ ಅಧೀಕ್ಷಕರು (ಕೇಂದ್ರ ಸ್ಥಾನ, ) ಭ್ರಷ್ಟಾಚಾರ ನಿಗ್ರಹ ದಳ , ಬೆಂಗಳೂರು ರವರು ಪತ್ರಿಸಿ ಆರೋಪಿ ಮರಪ್ಪ, ಕಾರ್ಯ ದರ್ಶಿ , ಗ್ರೇಡ್ –1 , ಸಿದ್ದಲಿಂಗಪುರ ಗ್ರಾಮ ಪಂಚಾಯ್ತಿ , ಮೈಸೂರು ಜಿಲ್ಲೆ ರವರ ವಿರುದ್ಧ ಅಭಿಯೋಜನಾ ಮಂಜೂರಾತಿ ಆದೇಶವನ್ನು ನೀಡಬೇಕಾಗಿ ಕೋರಿದ್ದರು. ಸದರಿ ಕೋರಿಕೆಯ ಪತ್ರದೊಂದಿಗೆ 16 ಸಾಕ್ಷಿದಾರರ ಹೇಳಿಕೆಗಳು, 8 ದಾಖಲಾತಿಗಳನ್ನು , ಶ್ರೀಮತಿ ಶೀಲಾವತಿ ರವರು ನೀಡಿದ್ದ ದೂರು , ಪ್ರ.ವ.ವ. ,

ಪ್ರಾಯೋಗಿಕ ಪಂಚನಾಮೆ , ಟ್ರಾಪ್ ಮಹಜರ್ , ರಾಸಾಯನಿಕ ಪರೀಕ್ಷಕರ ಪರೀಕ್ಷಣಾ ವರದಿ , ಕೃತ್ಯ ನಡೆದ ಸ್ಥಳದ ನಕಾಶೆ , ಗಳನ್ನು ಲಗತ್ತಿಸಿ ಕಳುಹಿಸಿದ್ದರು.

3. ಮೇಲ್ಕಂಡ ದಾಖಲಾತಿಗಳೆಲ್ಲವನ್ನು ನಾನು ಪರಿಶೀಲಿಸಿ , ದಿಃ 31.07.2019 ರಂದು ಆರೋಪಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1998 ರ ಕಲಂ 19(1)(ಸಿ) ಅನ್ವಯ ಶಿಕ್ಷಾರ್ಹ ಅಪರಾಧಕ್ಕಾಗಿ ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿ ಆದೇಶವನ್ನು ಮಾಡಿರುತ್ತೇನೆ. ಸದರಿ ಆದೇಶವನ್ನು ನನ್ನ ವಿವೇಚನೆಯನ್ನು ಬಳಸಿ ಮಾಡಿರುತ್ತೇನೆ. ಸದರಿ ಆದೇಶವನ್ನು ಈಗ ನೋಡುತ್ತಿದ್ದೇನೆ. ಅದರ ಮೇಲೆ ನನ್ನ ಸಹಿ ಇರುತ್ತದೆ. ಸದರಿ ಅಭಿಯೋಜನಾ ಮಂಜೂರಾತಿ ಆದೇಶವನ್ನು ಈಗ ನಿಪಿ 26 ಎಂತಲು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 26(ಎ) ಎಂತಲು ಗುರುತುಪಡಿಸಿಕೊಳ್ಳಲಾಯಿತು.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ –**

4. ವಿವೇಚನೆಯನ್ನು ಬಳಸಿ ಆದೇಶವನ್ನು ಮಾಡಲು, ಪ್ರಕರಣದ ಹಿನ್ನೆಲೆ ಮತ್ತು ಸಂಧರ್ಬಗಳನ್ನು ಅವಲೋಕಿಸಿ , ಆದೇಶ ಮಾಡಬೇಕಾಗುತ್ತದೆ ಎನ್ನುವುದು ಸರಿ . ನಮೂನೆ 11(ಬಿ) ಯನ್ನು ನೀಡುವ ಅಂತಿಮ ಅಧಿಕಾರ ಇರುವುದು ಪಿಡಿಒ ರವರಿಗೆ ಎನ್ನುವುದು ಸರಿ . ಕಾರ್ಯದರ್ಶಿ , ಆ ಸ್ವತ್ತಿಗೆ ಬರಬೇಕಾದಂತಹ ತೆರಿಗೆಯನ್ನು ಸಂಗ್ರಹಿಸುವುದು ಮತ್ತು ಈ ಬಾಬ್ತು ನೋಟೀಸನ್ನು ನೀಡುವುದು ಮಾತ್ರವೇ ಕೆಲಸವಾಗಿರುತ್ತದೆ ಎನ್ನುವುದು ಸರಿ . ಸಾಕ್ಷಿ ಮುಂದುವರೆದು ನುಡಿಯುತ್ತಾರೆ , ನಮೂನೆ 11(ಬಿ) ಯನ್ನು ನೀಡಲು ಮೊದಲು ಆನ್ ಲೈನ್ ನಲ್ಲಿ ಕಾರ್ಯದರ್ಶಿಯವರ ಲಾಗ್ ಇನ್ ನಲ್ಲಿ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ ಮಾಲೀಕತ್ವಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ಖಾತ್ರಿ ಪಡಿಸಿಕೊಂಡು ನಂತರ ಅನುಮೋದನೆಗಾಗಿ ಅವುಗಳನ್ನು ಪಿಡಿಒ ರವರ ಲಾಗ್ ಇನ್ ಗೆ ಕಳುಹಿಸಲಾಗುತ್ತದೆ ಎನ್ನುತ್ತಾರೆ. ನಾನು ಪರಿಶೀಲಿಸಿದ ದಾಖಲಾತಿಗಳಂತೆ , ಈ ಪ್ರಕರಣದಲ್ಲಿ ದೂರುದಾರರ ದಾಖಲಾತಿಗಳು ಮೊದಲ

ಬಾರಿಗೆ ಆರೋಪಿಗೆ ಯಾವ ದಿನಾಂಕದಂದು ಬಂದಿರುತ್ತವೆ ಎಂದು ನನಗೆ ಈಗ ಹೇಳಲು ಆಗುತ್ತಿಲ್ಲ. ನನ್ನ ಅಭಿಯೋಜನಾ ಮಂಜೂರಾತಿಯ ಆದೇಶದಲ್ಲಿ ಆರೋಪಿಗೆ ಯಾವ ದಿನ ಈ ಪ್ರಕರಣದ ಕಡತ (ದಾಖಲಾತಿಗಳು) ಹೋಗಿರುತ್ತವೆ ಎನ್ನುವುದನ್ನು ನಮೂದಿಸಿರುವುದಿಲ್ಲ. ನನ್ನ ಅಭಿಯೋಜನಾ ಮಂಜೂರಾತಿ ಆದೇಶದಲ್ಲಿ ಉಲ್ಲೇಖಿಸಿರುವ ದಾಖಲಾತಿಗಳನ್ನು ಹೊರತು ಪಡಿಸಿ ನಾನು ಬೇರೆ ಯಾವುದೇ ದಾಖಲಾತಿಗಳನ್ನು ಪರಿಶೀಲಿಸಿರುವುದಿಲ್ಲ ಎನ್ನುವುದು ಸರಿ . ಆದೇಶ ಮಾಡುವ ಮೊದಲು , ಆರೋಪಿ ಯಾವ ಕಾರಣಕ್ಕಾಗಿ ಹಣವನ್ನು ಪಡೆದಿರುತ್ತೇನೆ ಎಂದು ನೀಡಿರುವ ವಿವರಣೆಯನ್ನು ನಾನು ಪರಿಶೀಲಿಸಿರುವುದಿಲ್ಲ ಎನ್ನುವುದು ಸರಿ . ದೂರಿನಲ್ಲಿ , ದೂರು ಕೊಟ್ಟ 6 ತಿಂಗಳ ಹಿಂದೆ ದೂರುದಾರಳು ನಮೂನೆ 11(ಬಿ) ಗಾಗಿ ಅರ್ಜಿಯನ್ನು ಸಲ್ಲಿಸಿರುವ ಬಗ್ಗೆ ನಮೂದು ಇರುತ್ತದೆ ಎನ್ನುವುದು ಸರಿ . ಅರ್ಜಿ ಕೊಟ್ಟ 3 ತಿಂಗಳ ನಂತರ ಈ ಬಗ್ಗೆ ದೂರುದಾರಳು ಹೋಗಿ ವಿಚಾರಿಸಿರುವ ಬಗ್ಗೆ ನಮೂದು ಇರುತ್ತದೆ ಎನ್ನುವುದು ಸರಿ. ನಾನು ಆದೇಶ ಮಾಡುವ ಮೊದಲು, ದೂರುದಾರಳು ನಮೂನೆ 11(ಬಿ) ಗಾಗಿ ಯಾವ ದಿನ ಅರ್ಜಿಯನ್ನು ಕಛೇರಿಗೆ ನೀಡಿರುತ್ತಾಳೆ ಎನ್ನುವುದನ್ನು ಪರಿಶೀಲಿಸಿರುವುದಿಲ್ಲ. 05.09.2018 ರವರೆಗೆ ಆ ಸ್ವತ್ತಿಗೆ ಸಂಬಂಧಪಟ್ಟಂತೆ ಎಷ್ಟು ಕಂದಾಯದ ಹಣ ಬಾಕಿ ಇತ್ತು ಎನ್ನುವ ಬಗ್ಗೆ ಪರಿಶೀಲಿಸಿರುವುದಿಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕಂದಾಯದ ಬಾಕಿ ಹಣವನ್ನು ಪಾವತಿಸಲು ನೋಟೀಸನ್ನು ಕೊಟ್ಟಿರುತ್ತಾರೋ ಇಲ್ಲವೋ ಎನ್ನುವ ಬಗ್ಗೆ ನಾನು ದಾಖಲಾತಿಯನ್ನು ಪರಿಶೀಲಿಸಿರುವುದಿಲ್ಲ. ನಿಡಿ 2 ರಂತೆ ದೂರುದಾರಳಿಗೆ ದಿಃ 03.09.2018 ರಂದು ,ಒಟ್ಟು ರೂ.12,432/- ತೆರಿಗೆ ಹಣ ಪಾವತಿಸಲು ನೋಟೀಸನ್ನು ನೀಡಿ ಆಕೆಯ ಸಹಿಯನ್ನು ಪಡೆದಿರುತ್ತಾರೆ ಎನ್ನುವುದು ಸರಿ. ನನ್ನ ಆದೇಶದಲ್ಲಿ ನಾನು ಈ ನಿಡಿ 2 ನೋಟೀಸನ್ನು ಪರಿಶೀಲಿಸಿರುವ ಬಗ್ಗೆ ನಮೂದಿಸಿರುವುದಿಲ್ಲ ಎನ್ನುವುದು ಸರಿ. ನಿಡಿ 1 ರಂತೆ ದೂರುದಾರಳು ನೀಡಿರುವ ಅರ್ಜಿಯನ್ನು ದಿಃ 21.08.2018 ರಂದು ಸಿದ್ದಲಿಂಗಪುರ ಗ್ರಾಮ ಪಂಚಾಯ್ತಿ ಕಛೇರಿ ಪಡೆದಿರುತ್ತದೆ ಎನ್ನುವುದು ಸರಿ . ಈ

ನಿಡಿ 1 ರಂತೆ , ದೂರುದಾರಳು ಎಸಿಬಿ ಕಛೇರಿಗೆ ದೂರನ್ನು ನೀಡಿದ 16 ದಿನಗಳ ಮುಂಚೆ ಈ ಅರ್ಜಿಯನ್ನು ಗ್ರಾಮ ಪಂಚಾಯ್ತಿಗೆ ನೀಡಿರುವುದು ಕಂಡು ಬರುತ್ತದೆ ಎನ್ನುವುದು ಸರಿ . ನಾನು ಆದೇಶವನ್ನು ಮಾಡುವ ಮುನ್ನ ನಿಡಿ 1 ಅರ್ಜಿಯನ್ನು ಪರಿಶೀಲಿಸಿರುತ್ತೇನೆ. ದೂರಿನಲ್ಲಿ , 6 ತಿಂಗಳ ಹಿಂದೆ ಅರ್ಜಿಯನ್ನು ಸಲ್ಲಿಸಿ , 3 ತಿಂಗಳ ನಂತರ ಗ್ರಾಮ ಪಂಚಾಯ್ತಿಗೆ ಹೋಗಿ ವಿಚಾರಿಸಿರುವ ಸಂಬಂಧ ಯಾವುದೇ ದಾಖಲಾತಿಗಳನ್ನು ನಾನು ಪರಿಶೀಲಿಸಿರುವುದಿಲ್ಲ. ದೂರಿನಲ್ಲಿ ತಿಳಿಸಿರುವಂತೆ ಸಂಭಾಷಣೆಯನ್ನು ಮೊಬೈಲ್ ಕ್ಯಾಮರಾದಲ್ಲಿ ರೆಕಾರ್ಡ ಮಾಡಿಕೊಂಡಂತಹ , ರೆಕಾರ್ಡಿಂಗ್ ನ್ನು ನನಗೆ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿರುವುದಿಲ್ಲ. ದೂರಿನಲ್ಲಿ ನಮೂದಿಸಿರುವ ಪದಗಳು ಹಾಗೂ ಪ್ರಾಯೋಗಿಕ ಪಂಚನಾಮೆಯಲ್ಲಿ ಲಿಪೀಕರಣ ಮಾಡಿದ ಸಂಭಾಷಣೆ , ಎರಡೂ ಹೋಲಿಕೆಯಾಗುತ್ತವೆಯೋ ಇಲ್ಲವೋ ಎನ್ನುವುದನ್ನು ನಾನು ಪರಿಶೀಲಿಸಿರುವುದಿಲ್ಲ , ಏಕೆಂದರೆ ನನಗೆ ಅಂತಹ ಯಾವುದೇ ಸಂಭಾಷಣೆಯ ಸಿಡಿ ಯನ್ನು ಕಳುಹಿಸಿಕೊಟ್ಟಿರುವುದಿಲ್ಲ. ಅಭಿಯೋಜನಾ ಮಂಜೂರಾತಿಯ ಆದೇಶ ಮಾಡುವ ಮೊದಲು ತನಿಖಾಧಿಕಾರಿಯವರಿಗೆ ಪತ್ರಿಸಿ ಸಿಡಿ ಯನ್ನು ಕಳುಹಿಸಿಕೊಡಲು ನಾನು ಕೇಳಿರುವುದಿಲ್ಲ.

5. ನಿಡಿ 6 ರಂತೆ ಆರೋಪಿ ನೀಡಿರುವ ಲಿಖಿತ ವಿವರಣೆಯನ್ನು ನಾನು ಪರಿಶೀಲಿಸಿರುತ್ತೇನೆ. ನನ್ನ ಅಭಿಯೋಜನಾ ಮಂಜೂರಾತಿಯ ಆದೇಶದಲ್ಲಿ ಈ ನಿಡಿ 6 ರಂತೆ ನೀಡಿರುವ ವಿವರಣೆಯನ್ನು ನಾನು ಪರಿಶೀಲಿಸಿರುವ ಬಗ್ಗೆ ನಮೂದಿಸಿರುವುದಿಲ್ಲ ಎನ್ನುವುದು ಸರಿ . ಆರೋಪಿ ನೀಡಿರುವ ಲಿಖಿತ ವಿವರಣೆಯಲ್ಲಿ ತಾನು ಫಿರ್ಯಾದುದಾರರಿಂದ ತೆರಿಗೆ ಹಣವನ್ನು ಪಡೆದಿರುತ್ತೇನೆ ಎಂದು ತಿಳಿಸಿರುತ್ತಾನೆ ಎನ್ನುವುದು ಸರಿ .ಇವುಗಳನ್ನೆಲ್ಲಾ ಪರಿಶೀಲಿಸಿದ ನಂತರ ಆರೋಪಿಗೆ ನೋಟೀಸನ್ನು ನೀಡಿ , ಕರೆಸಿ , ವಿಚಾರಣೆ ಮಾಡಿರುವುದಿಲ್ಲ.

6. ಈ ಪ್ರಕರಣದಲ್ಲಿ ಆರೋಪಿಗೆ ಶಿಸ್ತು ಪ್ರಾಧಿಕಾರ ನಾನೇ ಆಗಿರುತ್ತೇನೆ ಎನ್ನುವುದು ಸರಿ . ಈ ಪ್ರಕರಣ ಆರೋಪಿಯ ವಿರುದ್ಧ ದಾಖಲಾದ ನಂತರ , ದುರ್ನಡತೆ ಎಂದು ಆರೋಪಿಯ ವಿರುದ್ಧ

ಇಲಾಖಾ ವಿಚಾರಣೆ ದಾಖಲಾಗಿರುತ್ತದೆ ಎನ್ನುವುದು ಸರಿ . ಇಲಾಖಾ ವಿಚಾರಣೆಯನ್ನು ಮಾಡಿದ ಅಧಿಕಾರಿ , ಆರೋಪಿಯ ವಿರುದ್ಧ ಮಾಡಿದ ಆಪಾದನೆ ರುಜುವಾತಾಗಿರುವುದಿಲ್ಲ ಎಂದು ವರದಿಯನ್ನು ನೀಡಿರುತ್ತಾರೆ ಎನ್ನುವುದು ಸರಿ . ಅದರ ಆಧಾರದ ಮೇಲೆ ನಾನೂ ಸಹ ಒಂದು ಆದೇಶ ಮಾಡಿರುತ್ತೇನೆ ಎನ್ನುವುದು ಸರಿ . ಈಗ ನೋಡುತ್ತಿರುವ ಆದೇಶ ನಾನು ಮಾಡಿದ ಆದೇಶವಾಗಿರುತ್ತದೆ ಎನ್ನುವುದು ಸರಿ . ದಿಃ12.03.2024 ರ ಆದೇಶವನ್ನು ನಿಡಿ 13 ಎಂದು ಗುರುತುಪಡಿಸಿಕೊಳ್ಳಲಾಯಿತು. ಅದರ ಮೇಲೆ ನನ್ನ ಸಹಿ ಇರುತ್ತದೆ.

7. ನಾನು ದಾಖಲಾತಿಗಳನ್ನು ಪರಿಶೀಲಿಸಿದ್ದೇ ಆದಲ್ಲಿ , ಆರೋಪಿ ತೆರಿಗೆ ಹಣವನ್ನು ಪಡೆದಿದ್ದ ಎನ್ನುವುದು ಕಂಡು ಬರುತ್ತಿತ್ತು ಎನ್ನುವುದು ಸರಿಯಲ್ಲ. ಹೀಗಿದ್ದಾಗಿಯೂ ಸಹ ಎಡಿಜಿಪಿ ರವರ ಒತ್ತಡದ ಮೇರೆಗೆ ತನಿಖಾ ದಾಖಲಾತಿಗಳನ್ನು ಪರಿಶೀಲಿಸದೇ , ಯಾಂತ್ರಿಕವಾಗಿ ಅಭಿಯೋಜನಾ ಮಂಜೂರಾತಿ ಆದೇಶವನ್ನು ಹೊರಡಿಸಿರುತ್ತೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.